9. ವಿಷಯ: ಇಸ್ಲಾಂ ಕಮಿಟಿಯಲ್ಲಿ ಆಗಿರುವ ಲೋಪಗಳ ಬಗ್ಗೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ):– ಸನ್ಮಾನ್ಯ ಸಭಾಧ್ಯಕ್ಷರೆ, ನನ್ನ ಮತಕ್ಷೇತ್ರ ಕೂಡಗಿ ಗ್ರಾಮದ ವಕ್ಫ್ ಮಂಡಳಿ ರಚನೆಯಲ್ಲಿ ಆ ಊರಿನ ಜನರು ವಕ್ಫ್ ಸಚಿವರಿಗೆ ಈ ಜನರ ಕಮಿಟಿಯನ್ನು ನೇಮಕ ಮಾಡಬೇಕೆಂದು ಒಂದು ಪತ್ರವನ್ನು ಕೊಟ್ಟಿದ್ದರು. ದುರ್ದೈವಶಾತ್ ಕಮಿಟಿಯು ಅವರು ಕೊಟ್ಟಿರುವಂತಹ ಪ್ರಸ್ತಾವನೆಯನ್ನು ತಿರಸ್ಕರಿಸಿ ಯಾರು ಸತ್ತಿದ್ದಾರೆ, ಅವರನ್ನು ಕಮಿಟಿಯ ಮೆಂಬರ್ ಮಾಡಿದ್ದಾರೆ. ನಾನು ಈ ಸಂಬಂಧ ಮಾನ್ಯ ಸಚಿವರಿಗೆ death certificate ಕೊಟ್ಟು ಸಹ ಹೇಳಿದಾಗ ನೀವು ನನಗೆ ಯಾವಾಗ ಈ ಬಗ್ಗೆ ಕೊಟ್ಟಿದ್ದೀಯಾ ಎಂದು ಕೇಳುತ್ತಾರೆ. ದಯಮಾಡಿ ಆ ಪಟ್ಟಿಯನ್ನು ರದ್ದುಪಡಿಸಿ ಪುನಃ ಪರಿಶೀಲನೆಯನ್ನು ಮಾಡಿ ಅಲ್ಲಿಯವರೆಗೆ ತಹಶೀಲ್ದಾರ್‌ರವರನ್ನು administrator ರನ್ನಾಗಿ ಮಾಡಬೇಕೆಂದು ಬೇರೆಯವರನ್ನು ನೇಮಕಾತಿ ಮಾಡುವ ಬಗ್ಗೆ ಆದೇಶವನ್ನು ಮಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ವಿಚಾರಕ್ಕೆ ಸಂಬಂಧಿಸಿದಂತೆ ನಾನು ವಕ್ಫ್ ಮಂತ್ರಿಗಳ ಗಮನಕ್ಕೆ ತಂದು ಅವರಿಂದ ಉತ್ತರವನ್ನು ಕೊಡಿಸಿಕೊಡುತ್ತೇನೆ.

ಅಧ್ಯಕ್ಷರು:– O.K ಮಾನ್ಯ ಕೆ.ಎಸ್. ಪುಟ್ಟಣ್ಣಯ್ಯರವರು ಸದನದಲ್ಲಿ ಇಲ್ಲ. ಮಾನ್ಯ ಕೆ.ಎಂ. ಶಿವಲಿಂಗೇಗೌಡರೆ ತಾವು ಕೇಳಿ.

10. ವಿಷಯ: ಶಾಲೆಗಳ ದುರಸ್ಥಿಗೆ ಸಂಬಂಧಿಸಿದಂತೆ ತುರ್ತು ಹಣ ಬಿಡುಗಡೆ ಮಾಡುವ ಬಗ್ಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):– ಮಾನ್ಯ ಅಧ್ಯಕ್ಷರೆ, ನಿಮಗೆ ಕ್ಷೇತ್ರಾವಾರು ಸುಮಾರು 40 ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತೇವೆ. ನೀವು ಅವರಿಗೆ ಪಟ್ಟಿ ಕೊಡಿ ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಎಲ್ಲರಿಗೂ ಒಂದು letter ಅನ್ನು ಬರೆದಿದ್ದರು. ನಾವುಗಳು ಯಾರಿಗೆ

ಪಟ್ಟಿಯನ್ನು ಕೊಡುವುದು ದುಡ್ಡು ಎಲ್ಲಿದೆ? ನಾವು ಪಟ್ಟಿ ಕೊಟ್ಟಿದ್ದು ದುಡ್ಡು ಬರುತ್ತದೆ, ದುರಸ್ತಿ ಕೆಲಸ ಮಾಡಿ ಎಂದು ಹೇಳಿದರೆ advance ಆಗಿ ಹೇಳಿದ್ದೇವೆ. ತಾವು ಈ ಸಂಬಂಧ ದುಡ್ಡು ಎಲ್ಲಿದೆ? ದುಡ್ಡನ್ನು ಕೊಡುತ್ತೋರೋ ಅಥವಾ ಇಲ್ಲವೋ ಏನು ಸಮಾಚಾರ ಎಂದು ಕೇಳುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನಾನು ಮಾನ್ಯ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ:– ಅದಕ್ಕಿಂತ ಮುಂಚೆ ಒಂದು ಮಾಹಿತಿ ಇದೆ. ಬಹಳ ಗಂಭೀರವಾಗಿದೆ ದುಡ್ಡಿಲ್ಲ, ಆಯಾಯ DDPI ಗಳು ಮೇಷ್ಟ್ರುಗಳಿಂದ ದುಡ್ಡನ್ನು collect ಮಾಡುತ್ತಿದ್ದಾರೆಂದು ತಿಳಿದುಬಂದಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಅದು ಏನು ಇಲ್ಲ. ಈ ಸಂಬಂಧ ದುಡ್ಡು ಬಂದಿರುವುದಿಲ್ಲ.

ಅಧ್ಯಕ್ಷರು:– ಮಾನ್ಯ ಕಾನೂನು ಸಚಿವರೆ, ಸಂಬಂಧಪಟ್ಟ ಮಂತ್ರಿಗಳಿಂದ ಒಂದು ಹೇಳಿಕೆಯನ್ನು ಕೊಡಿಸಿ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನಾನು ಮಾನ್ಯ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸಿಕೊಡುತ್ತೇನೆ.

ಅಧ್ಯಕ್ಷರು:– O.K.

11. ವಿಷಯ: ನೀರು ಪೂರೈಸಿ ಜಲಾಂಶವನ್ನು ಹೆಚ್ಚಿಸುವ ಬಗ್ಗೆ.

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ):– ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಸಾಸುವೆಹಳ್ಳಿ project 2013–14ನೇ ಸಾಲಿನಲ್ಲಿ ಕುಡಿಯುವ ನೀರಿಗೆ